**ಮಾನ್ಯ ಸಚಿವರು, ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಅಧ್ಯಕ್ಷರು, ರಾಜ್ಯ ಮೇಲ್ವಿಚಾರಣಾ ಸಮಿತಿ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:07.09.2021 ರಂದು ಜರುಗಿದ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ವೃತ್ತಿ/ಕೆಲಸ ನಿಷೇಧ ಮತ್ತು ಪುನರ್ವಸತಿ ಕಾಯ್ದೆ 2013ರ 4ನೇ ರಾಜ್ಯ ಮೇಲ್ವಿಚಾರಣಾ ಸಮಿತಿಯ ಸಭೆಯ ನಡವಳಿ**

**ಸಭೆಯಲ್ಲಿ ಹಾಜರಿದ್ದವರು:-**

| | | |
|---|---|---|
| 1 | **ಶ್ರೀ.ಕೋಟಾ ಶ್ರೀನಿವಾಸ ಪೂಜಾರಿ,**<br>ಮಾನ್ಯ ಸಚಿವರು, ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ. | ಅಧ್ಯಕ್ಷರು |
| 2 | **ಶ್ರೀ.ಎಂ.ಪಿ.ಕುಮಾರಸ್ವಾಮಿ,**<br>ಮಾನ್ಯ ಶಾಸಕರು ಮೂಡಿಗೆರೆ ವಿಧಾನಸಭಾ ಕ್ಷೇತ್ರ. | ಸದಸ್ಯರು ಹಾಗೂ ಮಾನ್ಯ ಶಾಸಕರು |
| 3 | **ಶ್ರೀ ಎಂ. ಶಿವಣ್ಣ ಕೋಟೆ,** ಅಧ್ಯಕ್ಷರು,<br>ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ, ಬೆಂಗಳೂರು | ಸದಸ್ಯರು |
| 4 | **ಶ್ರೀ.ಪಿ.ಪಿ.ವಾವ,** ಸದಸ್ಯರು,<br>ರಾಷ್ಟ್ರೀಯ ಸಫಾಯಿ ಕರ್ಮಚಾರಿಗಳ ಆಯೋಗ, ನವದೆಹಲಿ. | ಸದಸ್ಯರು |
| 5 | **ಶ್ರೀ.ಹೆಚ್,ಹನುಮಂತಪ್ಪ,**<br>ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ಆಯೋಗ | ಸದಸ್ಯರು, |
| 6 | **ಡಾ\|\|ಇ.ವೆಂಕಟಯ್ಯ ಭಾ.ಆ.ಸೇ (ನಿವೃತ್ತಿ),**<br>ಎಸ್.ಸಿ.ಎಸ್.ಪಿ. ನೋಡಲ್ ಏಜೆನ್ಸಿ | ಸಲಹೆಗಾರರು |
| 7 | **ಶ್ರೀಮತಿ.ಗೀತಾ ರಾಜು ವಾಡೇಕರ್** | ನಾಮನಿರ್ದೇಶಿತ ಸದಸ್ಯರು |
| 8 | **ಶ್ರೀಮತಿ.ಬೇಬಿ ಲಂಕೆಪ್ಪ ಮೇತ್ರಿ** | ನಾಮನಿರ್ದೇಶಿತ ಸದಸ್ಯರು |
| 9 | **ಶ್ರೀ.ಎಂ.ವಿ.ವೆಂಕಟೇಶ್** | ನಾಮನಿರ್ದೇಶಿತ ಸದಸ್ಯರು |
| 10 | **ಶ್ರೀ.ನಾಗರಾಜು ಬಿನ್ ಶಿವಶಂಕರ್** | ನಾಮನಿರ್ದೇಶಿತ ಸದಸ್ಯರು |
| 11 | **ಶ್ರೀ ಶ್ರೀರಾಮುಲು, ಮಾಜಿ ಅಧ್ಯಕ್ಷರು,**<br>ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ | - |
| 12 | **ಶ್ರೀ ಜಗದೀಶ್ ಹಿರೇಮನಿ, ಮಾಜಿ ಸದಸ್ಯರು,**<br>ರಾಷ್ಟ್ರೀಯ ಸಫಾಯಿ ಕರ್ಮಚಾರಿಗಳ ಆಯೋಗ | - |
| 13 | **ಡಾ\|\|ಎನ್.ನಾಗಾಂಬಿಕಾದೇವಿ, ಭಾ.ಆ.ಸೇ,**<br>ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ. | ಸದಸ್ಯರು |
| 14 | **ಶ್ರೀಮತಿ.ಉಮಾ ಮಹಾದೇವನ್ ಭಾ.ಆ.ಸೇ,**<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ. | ಸದಸ್ಯರು |
| 15 | **ಶ್ರೀಮತಿ.ಬಿ.ಬಿ.ಕಾವೇರಿ ಭಾ.ಆ.ಸೇ,**<br>ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ | ಸದಸ್ಯರು |

| | | |
|---|---|---|
| 16 | **ಶ್ರೀಮತಿ.ಪ್ರಿಯಾಂಕ ಮೇರಿ ಫ್ರಾನ್ಸಿಸ್ ಭಾ.ಆ.ಸೇ,**<br>ಆಯುಕ್ತರು, ಪಂಚಾಯತ್ ರಾಜ್ ಇಲಾಖೆ | ಸದಸ್ಯರು |
| 17 | **ಶ್ರೀ.ರವಿಕುಮಾರ ಸುರಪೂರ ಭಾ.ಆ.ಸೇ,**<br>ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ | ಸದಸ್ಯರು |
| 18 | **ಡಾ॥ಎಸ್.ಬಸವರಾಜು ಭಾ.ಆ.ಸೇ,**<br>ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ವಸತಿ ಇಲಾಖೆ | ಸದಸ್ಯರು |
| 19 | **ಶ್ರೀ.ಆರ್.ವಿಶಾಲ್ ಭಾ.ಆ.ಸೇ,**<br>**ಆಯುಕ್ತರು**,ಗ್ರಾಮೀಣಾ ಕುಡಿಯುವ ನೀರು & ನೈರ್ಮಲ್ಯ ಇಲಾಖೆ | ಸದಸ್ಯರು |
| 20 | **ಅಪರ ಮುಖ್ಯ ಕಾರ್ಯದರ್ಶಿಗಳು,**<br>ಆರ್ಥಿಕ ಇಲಾಖೆ ಇವರ ಪರವಾಗಿ **ಶ್ರೀ.ಸುದರ್ಶನ್,** ಉಪ ಕಾರ್ಯದರ್ಶಿ | ಸದಸ್ಯರು |
| 21 | **ಅಪರ ಮುಖ್ಯ ಕಾರ್ಯದರ್ಶಿಗಳು,**<br>ನಗರಾಭಿವೃದ್ಧಿ ಇಲಾಖೆ ಇವರ ಪರವಾಗಿ **ಶ್ರೀ.ಕೆ.ಪಿ.ಹಿರೇಮಠ್,** ಜಂಟಿ ಕಾರ್ಯದರ್ಶಿ | ಸದಸ್ಯರು |
| 22 | **ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,**<br>ಕಾರ್ಮಿಕ ಇಲಾಖೆ ಇವರ ಪರವಾಗಿ **ಡಾ॥ಎಸ್.ಬಿ.ರವಿಕುಮಾರ್,** ಜಂಟಿ ಕಾರ್ಮಿಕ ಆಯುಕ್ತರು, ಕಾರ್ಮಿಕ ಇಲಾಖೆ, | ಸದಸ್ಯರು |
| 23 | **ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,**<br>ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಇವರ ಪರವಾಗಿ **ಶ್ರೀ.ಜೈ.ಕುಮಾರ್.ಎಚ್.ಎಸ್,** ಜಂಟಿ ನಿರ್ದೇಶಕರು,(ಟಿ.ಸಿ) | ಸದಸ್ಯರು |
| 24 | **ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,**<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆರವರ ಪರವಾಗಿ **ಶ್ರೀ.ಎ.ಎಂ.ನರಪ್ಪ, ನಿರ್ದೇಶಕರು,** | ಸದಸ್ಯರು |
| 25 | **ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,**<br>ಕಂದಾಯ ಇಲಾಖೆರವರ ಪರವಾಗಿ **ಶ್ರೀ.ಸತೀಶ್ ಕುಮಾರ್ ಡಿ.ಎಂ,** ನಿರ್ದೇಶಕರು, | ಸದಸ್ಯರು |
| 26 | **ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು,**<br>ಪೋಲೀಸ್ ಇಲಾಖೆರವರ ಪರವಾಗಿ **ಶ್ರೀ.ಶಂಕರ್ ಪಿ.ಪಿ.,** ಡೆಪ್ಯೂಟಿ ಸೂಪರ್ ಇಂಡೆಂಟ್ ಆಫ್ ಪೋಲೀಸ್ (ಪ್ರ) ಪೋಲೀಸ್ ಇಲಾಖೆ, | ಸದಸ್ಯರು |
| 27 | **ಆಯುಕ್ತರು,** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆರವರ ಪರವಾಗಿ**ಡಾ॥ಹರೀಶ್ ಕುಮಾರ್, ವಿಶೇಷ ಆಯುಕ್ತರು,** | ಸದಸ್ಯರು |
| 28 | **ಅಧ್ಯಕ್ಷರು,** ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರ ಪರವಾಗಿಮ **ಶ್ರೀ.ಬಿ.ಎಂ.ಸೋಮಶೇಖರ್,** ಮುಖ್ಯ ಇಂಜಿನಿಯರ್ | ಸದಸ್ಯರು |
| 29 | **ವ್ಯವಸ್ಥಾಪಕ ನಿರ್ದೇಶಕರು,**<br>ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿರವರ ಪರವಾಗಿ **ಶ್ರೀ.ನೂರ್ ಜಾಹರಾ ಕಾನಮ್,** ಕಾರ್ಯದರ್ಶಿ, | ಸದಸ್ಯರು |
| 30 | **ಕಾರ್ಯದರ್ಶಿ,**<br>ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗರವರ ಪರವಾಗಿ **ಶ್ರೀ.ಪ್ರಕಾಶ್,** ಅಧ್ಯಕ್ಷರ ಆಪ್ತಕಾರ್ಯದರ್ಶಿ, | ಸದಸ್ಯರು |
| 31 | **ಶ್ರೀ.ಮಲಿಕಾರ್ಜುನ್,**<br>ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ | ಸದಸ್ಯರು |

| | | |
|---|---|---|
| 32 | **ಶ್ರೀ.ಚಂದ್ರಶೇಖರ್,**<br>ರಾಜ್ಯ ಮಟ್ಟದ ಬ್ಯಾಂಕುಗಳ ಸಮಿತಿ | ಸದಸ್ಯರು |
| 33 | ಡಿವಿಜನಲ್ ಸೆಂಟ್ರಲ್ ಆಫೀಸ್, ಸೌತ್ ವೆಸ್ಟ್ರನ್ ರೈಲ್ವೆರವರ ಪರವಾಗಿ **ಡಿವಿಜನಲ್ ಜನರಲ್ ಮ್ಯಾನೇಜರ್,** | ಸದಸ್ಯರು |
| 34 | **ಶ್ರೀ.ಜೆ.ಪ್ರೋಸ್ ಅವ್ಯೆಸ್.,** ಉಪ ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಬೆಂಗಳೂರು | ಸದಸ್ಯರು |
| 35 | **ಉಪ ನಿರ್ದೇಶಕರು,**<br>ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ | ಸದಸ್ಯರು |

ಎಂ.ಎಸ್.ಕಾಯ್ದೆ 2013 ರ ಸೆಕ್ಷನ್-26 ರನ್ವಯ ರಾಜ್ಯ ಮೇಲ್ವಿಚಾರಣಾ ಸಮಿತಿಯ ಸದಸ್ಯರನ್ನು ಸಭೆಗೆ ಆಹ್ವಾನಿಸಿ ಸಭೆಯನ್ನು ನಡೆಸಿಕೊಡುವಂತೆ ಮಾನ್ಯ ಅಧ್ಯಕ್ಷರಲ್ಲಿ ಸದಸ್ಯ ಕಾರ್ಯದರ್ಶಿಗಳು ಕೋರಿದರು.

ಮಾನ್ಯ ಸಭಾಧ್ಯಕ್ಷರು ಸಭೆಗೆ ಹಾಜರಾಗಿದ್ದ ಎಲ್ಲಾ ಅಧಿಕಾರಿಗಳನ್ನು ಪರಿಚಯ ಮಾಡಿಕೊಳ್ಳುವಂತೆ ತಿಳಿಸಿದರು ಮತ್ತು ಸಭೆಗೆ ಸಭಾ ನೋಟೀಸ್ ನೀಡಿ ಸಭೆಗೆ ಹಾಜರಾಗಿಲ್ಲದ ಅಧಿಕಾರಿಗಳಿಗೆ ಸ್ಪಷ್ಟೀಕರಣ ಕೇಳಿ ಕಾರಣ ನೋಟೀಸ್‌ನ್ನು ಸರ್ಕಾರದ ಮುಖ್ಯಕಾರ್ಯದರ್ಶಿಯವರಿಂದ ಜಾರಿ ಮಾಡುವಂತೆ ಸದಸ್ಯ ಕಾರ್ಯದರ್ಶಿಗಳಿಗೆ ಸೂಚಿಸಿದರು.

**ವಿಷಯ-1: ಎಂ.ಎಸ್.ಕಾಯ್ದೆ 2013 ರ ಪ್ರಕಾರ ಹಾಗೂ ರಾಷ್ಟ್ರೀಯ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯ, ನವದೆಹಲಿ ರವರ ನಿರ್ದೇಶನದಂತೆ ಬೆಂಗಳೂರು ನಗರ ಜಿಲ್ಲೆ (ಬಿಬಿಎಂಪಿ ವ್ಯಾಪ್ತಿ), ಬೆಂಗಳೂರು ಗ್ರಾಮಾಂತರ ಜಿಲ್ಲೆ, ಕಲಬುರಗಿ, ಧಾರವಾಡ, ಕೋಲಾರ, ಮೈಸೂರು, ಬಾಗಲಕೋಟೆ, ಬೆಳಗಾವಿ, ರಾಯಚೂರು, ಹಾವೇರಿ ಜಿಲ್ಲೆಗಳಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ವಿಶೇಷ ಸಮೀಕ್ಷೆಯನ್ನು ಪೂರ್ಣಗೊಳಿಸದೇ ಇರುವ ಬಗ್ಗೆ.**

**ಚರ್ಚೆ:** ಪೌರಾಡಳಿತ ನಿರ್ದೇಶಕರು, ಬೆಳಗಾವಿ ಜಿಲ್ಲೆಯಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಸಮೀಕ್ಷೆಯ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಗೊಂದಲವಿದ್ದು ಈ ಬಗ್ಗೆ ಸಫಾಯಿ ಕರ್ಮಚಾರಿಗಳ ಆಯೋಗದಲ್ಲಿ ಸ್ಪಷ್ಟೀಕರಣವನ್ನು ಕೋರಿರುತ್ತಾರೆ. 10 ಜಿಲ್ಲೆಗಳ ನಗರ ಸಮೀಕ್ಷೆಯು ಪೂರ್ಣಗೊಂಡಿದ್ದು, ಒಂದು ವಾರದೊಳಗೆ ಎನ್‌ಎಸ್‌ಕೆಎಫ್‌ಡಿಸಿಗೆ ಅಪ್‌ಲೋಡ್ ಕಾರ್ಯವನ್ನು ಪೂರ್ಣಗೊಳಿಸಲಾಗುವುದೆಂದು ತಿಳಿಸಿದರು.

ಬೆಳಗಾವಿ ಜಿಲ್ಲೆಯಲ್ಲಿ ಒಟ್ಟು 182 ಮ್ಯಾನ್ಯುಯಲ್ ಸ್ಕ್ಯಾವೆಂಜರ್ ವಿಷಯಕ್ಕೆ ಸಂಬಂಧಿಸಿದಂತೆ ಅವರ ಪಟ್ಟಿಯನ್ನು ನಿಯಮಾನುಸಾರ ಪರಿಗಣಿಸಲು ತಿಳಿಸಿ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ರವರಿಗೆ ಮಾನ್ಯ ಸಭಾಧ್ಯಕ್ಷರು ನಿರ್ದೇಶಿಸಿದರು.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯವರು 12 ಜಿಲ್ಲೆಗಳಲ್ಲಿ ಸಮೀಕ್ಷೆ ಮುಕ್ತಾಯಗೊಂಡಿರುವುದಾಗಿ ಸಭೆಗೆ ತಿಳಿಸಿದರು.

ವಿಶೇಷ ಆಯುಕ್ತರು, ಬಿಬಿಎಂಪಿ ರವರು ಈಗಾಗಲೇ ಸಮೀಕ್ಷೆ ಪೂರ್ಣಗೊಂಡಿದ್ದು, ಇನ್ನೂ ಸಮೀಕ್ಷೆ ಕೈಗೊಳ್ಳುವಂತೆ ಕೋರಿ ಅರ್ಜಿಗಳು ಸ್ವೀಕೃತಗೊಳ್ಳುತ್ತಿರುವುದಾಗಿ ಹಾಗೂ ಈಗಾಗಲೇ ಸಮೀಕ್ಷೆಯಲ್ಲಿ ಗುರುತಿಸಲ್ಪಟ್ಟಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ

ವಿವರಗಳನ್ನು ಕೇಂದ್ರದ ವೆಬ್‌ಸೈಟ್‌ನಲ್ಲಿ ಅಳವಡಿಸಲು ತಾಂತ್ರಿಕ ತೊಂದರೆಗಳು ಇರುವುದಾಗಿ ಸಭೆಗೆ ತಿಳಿಸಿರುತ್ತಾರೆ.

ಸದಸ್ಯ ಕಾರ್ಯದರ್ಶಿಗಳು ಹಾಗೂ ಅಪರ ಮುಖ್ಯ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆರವರು ಸಮೀಕ್ಷೆ ಕೈಗೊಂಡಿಲ್ಲದ ಜಿಲ್ಲೆಗಳಲ್ಲಿ ಗೊಂದಲವಿರುವ ಅಧಿಕಾರಿಗಳಿಗೆ ಈಗಾಗಲೇ ಇಲಾಖೆಯಿಂದ ವಿತರಿಸಿರುವ ಎಂ.ಎಸ್‌ಕಾಯ್ದೆ 2013 ರ ಕಾಯ್ದೆ ಹಾಗೂ ನಿಯಮಗಳಲ್ಲಿ ಸಮೀಕ್ಷೆ ಕೈಗೊಳ್ಳುವ ವಿಧಾನಗಳ ಬಗ್ಗೆ ವಿವರಿಸಿರುವಂತೆ ಸಮೀಕ್ಷೆಯನ್ನು ತುರ್ತಾಗಿ ಕೈಗೊಂಡು ಹಾಗೂ ಗುರುತಿಸಲ್ಪಟ್ಟಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ವಿವರಗಳನ್ನು ಕೇಂದ್ರದ 'ಸ್ವಚ್ಛತಾ ಅಭಿಯಾನ ಆಪ್'ನಲ್ಲಿ ಅಳವಡಿಸಲು ದಿನಾಂಕ:12.09.2021 ರಂದು ಭಾರತ ಸರ್ಕಾರದ ಅಧಿಕಾರಿಗಳು ಹಾಗೂ ರಾಜ್ಯದ ವಿವಿಧ ಇಲಾಖಾ ಮುಖ್ಯಸ್ಥರೊಂದಿಗೆ ವಿಡಿಯೋ ಕಾನ್ಫರೆನ್ಸ್ ಸಭೆಯನ್ನು ಏರ್ಪಡಿಸಿದ್ದು, ಕೇಂದ್ರ ಸರ್ಕಾರದ ಅಧಿಕಾರಿಗಳು ನೀಡಿರುವ ನಿರ್ದೇಶನದಂತೆ ದಿನಾಂಕ:12.09.2021 ರಂದು ಕೊನೆಯ ದಿನಾಂಕವಾಗಿದ್ದು ನಂತರದ ದಿನಗಳಲ್ಲಿ ಅರ್ಜಿಗಳನ್ನು ಅಪ್‌ಲೋಡ್ ಮಾಡಲು ಅವಕಾಶವಿರುವುದಿಲ್ಲ ಎಂದು ತಿಳಿಸಲಾಗಿತ್ತು. 'ಸ್ವಚ್ಛತಾ ಅಭಿಯಾನ ಆಪ್'ನಲ್ಲಿ ಅಳವಡಿಸಲು ಕ್ರಮಕೈಗೊಳ್ಳುವಂತೆ ನಂತರವೂ ಸಾಧ್ಯವಾಗದಿದ್ದಲ್ಲಿ, ಕೇಂದ್ರದ ಅಧಿಕಾರಿಗಳನ್ನು ಸಂಪರ್ಕಿಸಿ ಸಮಸ್ಯೆಗಳನ್ನು ಪರಿಹರಿಸಿಕೊಂಡು ಆಪ್‌ನಲ್ಲಿ ಅಳವಡಿಸುವಂತೆ ತಿಳಿಸಿದರು.

**ತೀರ್ಮಾನ:**

1. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಸಮೀಕ್ಷೆ ಕೈಗೊಳ್ಳಲು ಅಳವಡಿಸಿಕೊಂಡಿರುವ ಮಾನದಂಡವನ್ನು ಬೆಳಗಾವಿ ಜಿಲ್ಲೆಯಲ್ಲೂ ಸಹ ಅಳವಡಿಸಿಕೊಂಡು ತುರ್ತಾಗಿ ಸಮೀಕ್ಷೆ ಕೈಗೊಂಡು ಮುಂದಿನ ಸಭೆಗೆ ಮಾಹಿತಿಯನ್ನು ನೀಡುವಂತೆ ನಿರ್ದೇಶಕರು, ಪೌರಾಡಳಿತ ಇಲಾಖೆಗೆ ಸೂಚಿಸಿದರು.
2. ಸ್ವಯಂ ಪ್ರೇರಿತವಾಗಿ ಸಲ್ಲಿಸಿರುವ ಅರ್ಜಿಗಳನ್ನು ಈ ಕೂಡಲೆ ಕಾಯ್ದೆಯ ನಿಯಮಾನುಸಾರ ಪರಿಶೀಲಿಸಿ ಸಮೀಕ್ಷೆ ಕೈಗೊಂಡು ರಾಜ್ಯದ ಸಮೀಕ್ಷಾ ಸಮಿತಿ ಅನುಮೋದನೆಗೆ ಮಂಡಿಸುವುದು.
3. ಈಗಾಗಲೇ ಸಮೀಕ್ಷೆಯಲ್ಲಿ ಗುರುತಿಸಲ್ಪಟ್ಟಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ವಿವರಗಳನ್ನು ಕೇಂದ್ರದ ವೆಬ್‌ಸೈಟ್‌ನ ತಾಂತ್ರಿಕ ತೊಂದರೆಗಳನ್ನು ನಿವಾರಿಸಿಕೊಂಡು ಒಂದು ವಾರದೊಳಗಾಗಿ ಅಪ್‌ಲೋಡ್ ಮಾಡುವುದಾಗಿ ಬಿಬಿಎಂಪಿ ಅಧಿಕಾರಿಗಳೇ ಒಪ್ಪಿರುವಂತೆ ಮುಂದಿನ ಸಭೆಗೆ ಮಾಹಿತಿ ಒದಗಿಸುವುದು.
4. ಬಾಕಿ ಉಳಿದಿರುವ 18 ಜಿಲ್ಲೆಗಳ ಸಮೀಕ್ಷೆಯನ್ನು ಎಂ.ಎಸ್ ಕಾಯ್ದೆ ಮತ್ತು ನಿಯಮಗಳಲ್ಲಿರುವಂತೆ ಕ್ರಮವಹಿಸಿ ಸಮೀಕ್ಷಾ ಕಾರ್ಯವನ್ನು ಅತೀ ತುರ್ತಾಗಿ ಪೂರ್ಣಗೊಳಿಸುವುದು ಹಾಗೂ ಈ ಕೂಡಲೇ ಆಯಾ ಇಲಾಖೆಗಳು ಸಮೀಕ್ಷೆಗಳ ಕಾರ್ಯಕ್ರಮಗಳ ಬಗ್ಗೆ ಒಂದು ವಾರದೊಳಗೆ ವೇಳಾಪಟ್ಟಿ ನಿಗಧಿಪಡಿಸಿ ಕ್ರಮವಹಿಸುವುದು.

**(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ನಿರ್ದೇಶಕರು-ಪೌರಾಡಳಿತ ನಿರ್ದೇಶನಾಲಯ, ಮುಖ್ಯಆಯುಕ್ತರು-ಬಿಬಿಎಂಪಿ)**

**ವಿಷಯ-2 :ಗ್ರಾಮೀಣ ಪ್ರದೇಶಗಳಲ್ಲಿ ನಿರ್ಮಿಸಲಾಗಿರುವ ಸಿಂಗಲ್‌ಪಿಟ್‌ಗಳನ್ನು ಸ್ವಚ್ಛಗೊಳಿಸಲು ಕೈಗೊಂಡಿರುವ ವಿಧಾನ ಹಾಗೂ ವ್ಯಾಪಕ ಪ್ರಚಾರ ಮಾಡಲು ತೆಗೆದುಕೊಂಡ ಕ್ರಮಗಳ ಕುರಿತು**

**ಚರ್ಚೆ:** ಗ್ರಾಮೀಣ ಭಾಗಗಳಲ್ಲಿ ಸಿಂಗಲ್ ಪಿಟ್‌ಗಳು ಅಸ್ತಿತ್ವದಲ್ಲಿರುವುದರಿಂದ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಇನ್ನೂ ಜಾರಿಯಲ್ಲಿರುತ್ತದೆ. ದೊಡ್ಡ ತಾಲೂಕುಗಳಲ್ಲಿ ಖರೀದಿ ಮಾಡಿರುವ ಯಂತ್ರಗಳನ್ನು ಚಿಕ್ಕ ಚಿಕ್ಕ ತಾಲೂಕುಗಳಿಗೂ ಬಳಸಿಕೊಳ್ಳಬಹುದು ಎಂಬುದಾಗಿ ಸಭಾಧ್ಯಕ್ಷರು ಪ್ರಸ್ತಾಪಿಸಲಾಗಿ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿರವರು ಜಿಲ್ಲಾ ಪಂಚಾಯತ್ ಹಾಗೂ ತಾಲೂಕು ಪಂಚಾಯತ್‌ಗಳಲ್ಲಿ ಸ್ಕ್ಯಾವೆಂಜಿಂಗ್ ಮಾಡಿಸಲು ಯಂತ್ರಗಳನ್ನು ಖರೀದಿ ಮಾಡಿ ನಿರ್ವಹಣೆ ಮಾಡಲಾಗುತ್ತಿದೆ.

2012-13ನೇ ಸಾಲಿನಲ್ಲಿ ನಿರ್ಮಲ ಯೋಜನೆ ಅಡಿಯಲ್ಲಿ ಯಂತ್ರಗಳನ್ನು ಖರೀದಿ ಮಾಡಿದ್ದು, ಪ್ರಸ್ತುತ ಯಂತ್ರಗಳು ಹಾಳಾಗಿರುತ್ತವೆ. 224 ತಾಲೂಕುಗಳಲ್ಲಿ 75 ಸಕ್ಕಿಂಗ್ ಯಂತ್ರಗಳು ಸುಸ್ಥಿತಿಯಲ್ಲಿರುತ್ತವೆ, 29 ದುರಸ್ತಿಯಲ್ಲಿರುತ್ತವೆ, 243 ಯಂತ್ರಗಳು ಅವಶ್ಯವಿರುತ್ತದೆಎಂದು ತಿಳಿಸಿರುತ್ತಾರೆ.

ಸದಸ್ಯ ಕಾರ್ಯದರ್ಶಿ ಹಾಗೂ ಅಪರ ಮುಖ್ಯ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ರವರು ಸ್ವಚ್ಛ ಭಾರತ ಅಭಿಯಾನದಡಿ ಕಡ್ಡಾಯವಾಗಿ ಯಂತ್ರಗಳನ್ನು ಖರೀದಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಆದ್ದರಿಂದ, ಆ ಯೋಜನೆಗಳಡಿ ಖರೀದಿಸುವಂತೆ ನಿರ್ದೇಶನ ನೀಡಿದರು.

ಹಿಂದಿನ ಸಭೆಯ ತೀರ್ಮಾನದಂತೆ ಗ್ರಾಮೀಣ ಭಾಗದಲ್ಲಿರುವ ಸಿಂಗಲ್‌ಪಿಟ್‌ಗಳನ್ನು ಆಧುನಿಕ ರಾಸಾಯನಿಕ ಪೌಡರ್ ಬಳಸಿ ಸ್ವಚ್ಛಗೊಳಿಸಿದ ನಂತರ ಬರುವ ನೀರನ್ನು ಕೃಷಿ ಚಟುವಟಿಕೆಗಳಿಗೆ ಬಳಸಿಕೊಂಡು ಸಾಲಿಡ್‌ನ್ನು ಗೊಬ್ಬರ ರೂಪದಲ್ಲಿ ಬಳಸಿಕೊಳ್ಳಬಹುದಾಗಿರುವುದರಿಂದ ಗ್ರಾಮೀಣಾಭಿವೃದ್ಧಿ ಪಂಚಾಯತ್ ಇಲಾಖೆಯಿಂದ ಸದರಿ ಪೌಡರ್‌ನ ಬಳಕೆ ಮಾಡಿ ಸಾಧಕ ಭಾದಕಗಳ ಫಲಿತಾಂಶವನ್ನು ನೀಡಲು ಪ್ರಾಯೋಗಿಕವಾಗಿ ರಾಮನಗರ, ರಾಯಚೂರು ಜಿಲ್ಲೆಗಳಿಗೆ ನೀಡಲಾಗಿರುತ್ತದೆ. ಫಲಿತಾಂಶ ಬಂದ ನಂತರ ಇತರೆ ಜಿಲ್ಲೆಗಳಿಗೆ ಪೌಡರ್‌ನ್ನು ಉಪಯೋಗಿಸಲು ಸೂಚನೆ ನೀಡಲಾಗುವುದೆಂದು ಸಭೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯವರು ವಿವರಿಸಿದರು.

**ತೀರ್ಮಾನ :**

1. ತಾಲೂಕು ಪಂಚಾಯತ್‌ಗಳಲ್ಲಿ ಮತ್ತು ಜಿಲ್ಲಾ ಪಂಚಾಯತ್‌ಗಳಲ್ಲಿ ಖಡ್ಡಾಯವಾಗಿ ಅವಶ್ಯವಿರುವಷ್ಟು ಹೊಸ ಯಂತ್ರಗಳನ್ನು ಖರೀದಿ ಮಾಡಿ ಮುಂದಿನ ಸಭೆಗೆ ಅಗತ್ಯ ದಾಖಲಾತಿಗಳನ್ನು ಒದಗಿಸುವುದು.
2. ದುರಸ್ತಿಯಲ್ಲಿರುವ ಎಲ್ಲಾ ಸಕ್ಕಿಂಗ್ ಜಟ್ಟಿಂಗ್ ಯಂತ್ರಗಳನ್ನು ಈ ಕೂಡಲೇ ರಿಪೇರಿ ಮಾಡಿಸಿ ಉಪಯೋಗಿಸುವುದು.
3. ದೊಡ್ಡ ದೊಡ್ಡ ತಾಲೂಕುಗಳಲ್ಲಿ ಯಂತ್ರಗಳನ್ನು ಖರೀದಿಸಿ ಅವಶ್ಯವಿರುವ ಸಣ್ಣ ತಾಲೂಕುಗಳಿಗೆ ಬಾಡಿಗೆ ಆಧಾರದ ಮೇಲೆ ಉಪಯೋಗಿಸುವುದು.
4. ತಾಲೂಕು ಹಾಗೂ ಜಿಲ್ಲಾ ಮಟ್ಟದ ಸಭೆಗಳಲ್ಲಿ ಮಾನವನ ಮೂಲಕ ಪಿಟ್‌ಗುಂಡಿಗಳ ಸ್ವಚ್ಛತಾ ಕಾರ್ಯವನ್ನು ಮಾಡಿಸಬಾರದೆಂದು ಪ್ರಚಾರ/ಅರಿವು ಮೂಡಿಸುವುದು.
5. ಪಿಟ್‌ಗುಂಡಿಯಲ್ಲಿ ಪೌಡರ್ ಬಳಕೆ ಮಾಡಿ ಉಪಯುಕ್ತದ ಬಗ್ಗೆ ಗ್ರಾಮೀಣ ಅಭಿವೃದ್ಧಿ ಪಂಚಾಯತ್ ರಾಜ್ ಇಲಾಖೆಯು ಗ್ರಾಮೀಣ ಪ್ರದೇಶದಲ್ಲಿ ಪ್ರಾಯೋಗಿಕವಾಗಿ ಪರಿಶೀಲನೆ ನಡೆಸಿದ್ದು, ಈ ಬಗ್ಗೆ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆಯವರು ವರದಿಯನ್ನು ಪಡೆದು ಪೌರಾಡಳಿತ ನಿರ್ದೇಶನಾಲಯ ಗ್ರಾಮೀಣ ಅಭಿವೃದ್ಧಿ ಪಂಚಾಯತ್ ರಾಜ್ ಇಲಾಖೆಯೊಂದಿಗೆ ಸಭೆ ನಡೆಸಿ ಮುಂದಿನ ಸಭೆಗೆ ಮಾಹಿತಿ ಸಲ್ಲಿಸುವುದು.

(ಕ್ರಮ: **ಆಯುಕ್ತರು**-ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, **ಆಯುಕ್ತರು**-ಬಿ.ಬಿ.ಎಂ.ಪಿ, **ಆಯುಕ್ತರು**-ಸಮಾಜ ಕಲ್ಯಾಣ ಇಲಾಖೆ, **ನಿರ್ದೇಶಕರು**-ಪೌರಾಡಳಿತ ನಿರ್ದೇಶನಾಲಯ)

**ವಿಷಯ-3: ಎಂ.ಎಸ್.ಕಾಯ್ದೆ 2013ರ ಸೆಕ್ಷನ್ 13 & 16ರ ಪ್ರಕಾರ ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಪುನರ್ವಸತಿ ಕಲ್ಪಿಸಿರುವ ಬಗ್ಗೆ ಮಾಹಿತಿ.**

1. ನಗರ ಸ್ಥಳೀಯ ಸಂಸ್ಥೆಗಳು ಮತ್ತು ಗ್ರಾಮೀಣ ಭಾಗದಲ್ಲಿ ಗುರುತಿಸಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಕುಟುಂಬದ ಸದಸ್ಯರನ್ನೊಳಗೊಂಡ ಗುರುತಿನ ಚೀಟಿಯನ್ನು ನೀಡಲು ಕ್ರಮವಹಿಸಲು ವಿಳಂಬವಾದಲ್ಲಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು/ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮೇಲೆ ದೌರ್ಜನ್ಯ ಕಾಯ್ದೆಯಡಿ ಪ್ರಕರಣವನ್ನು ದಾಖಲಿಸಲು ಕ್ರಮವಹಿಸುವುದು.

**ಚರ್ಚೆ:** ಗ್ರಾಮೀಣ ಪ್ರದೇಶದಲ್ಲಿ 2016 ರಲ್ಲಿ 417 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ನ್ನು ಗುರುತಿಸಿ 398 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಗುರುತಿನ ಚೀಟಿಯನ್ನು ವಿತರಿಸಲಾಗಿರುತ್ತದೆ. 2018-19 ರಲ್ಲಿ ಜನರಿಗೆ 12 ಜಿಲ್ಲೆಗಳಲ್ಲಿ 1484 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳನ್ನು ಗುರುತಿಸಿದ್ದು, ಈ ಪೈಕಿ 1086 ಐ.ಡಿ. ಕಾರ್ಡ್ ವಿತರಿಸಲಾಗಿರುತ್ತದೆ. 519 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಗುರುತಿನ ಚೀಟಿಯನ್ನು ವಿತರಿಸಬೇಕಾಗಿರುತ್ತದೆ. ಆದರೆ 29 ಜನ ಮರಣ ಹೊಂದಿರುತ್ತಾರೆ. 164 ಜನ ಈ ರಾಜ್ಯವನ್ನು ಬಿಟ್ಟು ಇತರೆ ರಾಜ್ಯಗಳಿಗೆ ವಲಸೆ ಹೋಗಿರುತ್ತಾರೆ. 53 ಜನರಿಗೆ ಗುರುತಿನ ಚೀಟಿಯನ್ನು ವಿತರಿಸಿರುವುದಿಲ್ಲ. ಈ ಬಗ್ಗೆ ಒಂದು ವಾರದೊಳಗೆ ಸೂಕ್ತ ಕ್ರಮವಹಿಸಲಾಗುವುದೆಂದು ಸಭೆಗೆ ಹಾಜರಿದ್ದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಆಯುಕ್ತರು ತಿಳಿಸಿರುತ್ತಾರೆ.

ಪೌರಾಡಳಿತ ನಿದೇಶನಾಲಯದಿಂದ 2013ರಲ್ಲಿ 100 ಜನ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳನ್ನು ಗುರುತಿಸಿದ್ದು, 100 ಜನರಿಗೂ ಗುರುತಿನ ಚೀಟಿಯನ್ನು ವಿತರಿಸಲಾಗಿರುತ್ತದೆ. 2019 ರಲ್ಲಿ 1333 ಜನರನ್ನು ಗುರುತಿಸಿದ್ದು, ಈ ಪೈಕಿ 80 ಜನರಿಗೆ ಗುರುತಿನ ಚೀಟಿಯನ್ನು ವಿತರಿಸಲಾಗಿದೆಯೆಂದು ಉಳಿದಂತೆ ಎಲ್ಲಾ ಜಿಲ್ಲೆಗಳಿಗೂ ಗುರುತಿಸಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಗುರುತಿನ ಚೀಟಿಯನ್ನು ವಿತರಿಸಲಾಗುವುದೆಂದು ಪೌರಾಡಳಿತ ಇಲಾಖೆ, ನಿರ್ದೇಶಕರು ಸಭೆಗೆ ತಿಳಿಸಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 2013ರಲ್ಲಿ 201 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳನ್ನು ಮತ್ತು 2020ರಲ್ಲಿ 1625 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳನ್ನು ಗುರುತಿಸಿದ್ದು, ಈ ಬಗ್ಗೆ ಗುರುತಿನ ಚೀಟಿ ವಿತರಿಸಿರುವ ಬಗ್ಗೆ ಸಭೆಗೆ ಮಾಹಿತಿ ನೀಡದೆ ಇರುವುದರಿಂದ ವಿಷಾದ ವ್ಯಕ್ತಪಡಿಸಿದರು.

ಪರಿಶಿಷ್ಟ ಜಾತಿ ಉಪಯೋಜನೆ ಹಾಗೂ ಪರಿಶಿಷ್ಟ ವರ್ಗಗಳ ಉಪಯೋಜನೆಯ ನೋಡಲ್ ಅಧಿಕಾರಿಗಳು ಮ್ಯಾನ್‌ಹೋಲ್ ಸ್ವಚ್ಛಗೊಳಿಸುವಾಗ ಮೃತಪಟ್ಟ ಕಾರ್ಮಿಕರ ಕುಟುಂಬದ ಅವಲಂಬಿತರಿಗೂ ಸಹ ಗುರುತಿನ ಚೀಟಿಯನ್ನು ನೀಡಬೇಕಾಗಿರುತ್ತದೆ ಎಂದು ತಿಳಿಸಿದರು.

**ತೀರ್ಮಾನ:**

1. ಎಂ.ಎಸ್.ಕಾಯ್ದೆ 2013 ನಿಯಮಗಳ ಪ್ರಕಾರ ರಚಿಸಿದ ರಾಜ್ಯ ಸರ್ವೆ ಸಮಿತಿಯಲ್ಲಿ ಅನುಮೋದನೆಯಾಗಿರುವ 5080 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಕಡ್ಡಾಯವಾಗಿ

ಸಂಬಂಧಪಟ್ಟ ಇಲಾಖೆಗಳು ಗುರುತಿನ ಚೀಟಿಯನ್ನು ವಿತರಿಸಿ ಸಭೆಗೆ ಮಾಹಿತಿಯನ್ನು ನೀಡಲು ಕ್ರಮವಹಿಸುವುದು.

2. ನಗರ ಪ್ರದೇಶದಲ್ಲಿ ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಕಡ್ಡಾಯವಾಗಿ ವಸತಿಯನ್ನು ಕಲ್ಪಿಸಿಕೊಡಲು ಪೌರಕಾರ್ಮಿಕರ ಗೃಹ ಭಾಗ್ಯ ಅಥವಾ ರಾಜೀವ್ ಗಾಂಧಿ ವಸತಿ ನಿಗಮ ಯೋಜನೆಯ ಮೂಲಕ ವಸತಿಯನ್ನು ಕಲ್ಪಿಸಿಕೊಡಲು ಪೌರಾಡಳಿತ ಇಲಾಖೆಯು ಸೂಕ್ತ ಕ್ರಮವಹಿಸುವುದು.

ನಗರ ಪ್ರದೇಶದಲ್ಲಿ ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಕಡ್ಡಾಯವಾಗಿ ವಸತಿಯನ್ನು ಕಲ್ಪಿಸಿಕೊಡಲು ಪೌರಕಾರ್ಮಿಕರ ಗೃಹ ಭಾಗ್ಯ ಅಥವಾ ರಾಜೀವ್‌ಗಾಂಧಿ ವಸತಿ ನಿಗಮ ಯೋಜನೆಯ ಮೂಲಕ ವಸತಿಯನ್ನು ಕಲ್ಪಿಸಿಕೊಡಲು ಪೌರಾಡಳಿತ ಇಲಾಖೆಯು ಸೂಕ್ತ ಕ್ರಮವಹಿಸುವುದು.

**ವಿಷಯ: ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಕುಟುಂಬದ ಅವಲಂಬಿತರಿಗೆ ಗ್ರಾಮೀಣ ಭಾಗದಲ್ಲಿ ರಾಜೀವ್‌ಗಾಂಧಿ ವಸತಿ ನಿಗಮದಿಂದ ಪ್ರಥಮ ಆದ್ಯತೆ ಮೇರೆಗೆ ವಸತಿಯನ್ನು ಕಲ್ಪಿಸಲು ಕ್ರಮ ವಹಿಸುವುದು.**

**ಚರ್ಚೆ:** ರಾಜ್ಯದಲ್ಲಿ ೫೦೮೦ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳನ್ನು ಗುರುತಿಸಿದ್ದು, ಕಾಯ್ದೆ ಜಾರಿಗೆ ಬಂದ ೯ ತಿಂಗಳೊಳಗೆ ಎಲ್ಲಾ ಕುಟುಂಬಗಳಿಗೂ ವಾಸಿಸಲು ಸೂಕ್ತ ಮನೆಯನ್ನು ಕಲ್ಪಿಸಬೇಕಾಗುತ್ತದೆ. ಹಾಗೂ ಮನೆಗಳು ಇದ್ದಲ್ಲಿ ದುರಸ್ತಿ ಮಾಡಿಕೊಳ್ಳಲು ಸೂಕ್ತ ವ್ಯವಸ್ಥೆ ಕೈಗೊಳ್ಳಬೇಕಾಗಿರುತ್ತದೆ. ಆದರೆ, ಈ ಬಗ್ಗೆ ರಾಜ್ಯದಲ್ಲಿ ಗುರುತಿಸಿರುವಂತಹ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಸೂಕ್ತ ಮನೆಗಳನ್ನು ಕಲ್ಪಿಸಿರುವ ಕುರಿತು ಮಾಹಿತಿ ಲಭ್ಯವಿರುವುದಿಲ್ಲ ಹಾಗೂ ಹಲವಾರು ಜಿಲ್ಲೆಗಳಿಗೆ ಆಯೋಗವು ಭೇಟಿ ನೀಡಿದ ಸಂದರ್ಭದಲ್ಲಿ ಮನೆಗಳನ್ನು ಹಂಚಿಕೆ ಮಾಡದೇ ಇರುವ ಬಗ್ಗೆ ಕಂಡುಬಂದಿರುತ್ತದೆಂದು ಆಯೋಗದ ಅಧ್ಯಕ್ಷರು ತಿಳಿಸಿರುತ್ತಾರೆ. ಈ ವಿಚಾರವು ಬಹಳ ಮುಖ್ಯವಾಗಿದ್ದು, ಮೊದಲನೇ ಆದ್ಯತೆ ಮೇರೆಗೆ ಎಲ್ಲಾ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಕುಟುಂಬದವರಿಗೆ ಮನೆಗಳನ್ನು ನೀಡಲು ಕ್ರಮವಹಿಸುವುದು ಹಾಗೂ ಈ ಬಗ್ಗೆ ಮುಂದಿನ ಸಭೆಯ ಒಳಗಾಗಿ ಯಾವ ಹಂತದಲ್ಲಿದೆ ಎಂಬುದರ ಬಗ್ಗೆ ಅಗತ್ಯ ದಾಖಲೆಗಳೊಂದಿಗೆ ಮಾಹಿತಿ ಸಲ್ಲಿಸುವುದು ಹಾಗೂ ಕಡ್ಡಾಯವಾಗಿ ಎಲ್ಲಾ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಮನೆಗಳನ್ನು ಒದಗಿಸಲು ಸೂಕ್ತ ಕ್ರಮ ಕೈಗೊಳ್ಳುವುದು.

**ತೀರ್ಮಾನ:**

1. ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಗುರುತಿಸಿರುವ ಎಲ್ಲಾ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಪಟ್ಟಿಯನ್ನು ಆಯಾ ಇಲಾಖೆಯ ಮುಖ್ಯಸ್ಥರು ಕಡ್ಡಾಯವಾಗಿ ರಾಜೀವ್ ಗಾಂಧಿ ವಸತಿ ಅಭಿವೃದ್ಧಿ ನಿಗಮಕ್ಕೆ ಸಲ್ಲಿಸುವುದು.
2. ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಗುರುತಿಸಿರುವ ಎಲ್ಲಾ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಕಡ್ಡಾಯವಾಗಿ ಮನೆಗಳನ್ನು ಮೊದಲನೇ ಆದ್ಯತೆ ಮೇರೆಗೆ ಹಂಚಿಕೆ ಮಾಡಿ, ಮುಂದಿನ ಸಭೆಯ ಒಳಗಾಗಿ ಹಂಚಿಕೆ ಮಾಡಿರುವ ಕುರಿತು ಅಗತ್ಯ ದಾಖಲಾತಿಗಳೊಂದಿಗೆ ಮಾಹಿತಿ ಸಲ್ಲಿಸುವುದು.

(**ಕ್ರಮ:** ಆಯುಕ್ತರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ವ್ಯವಸ್ಥಾಪಕ ನಿರ್ದೇಶಕರು ರಾಜೀವ ಗಾಂಧಿ ವಸತಿ ನಿಗಮ ನಿಯಮಿತ, ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ, ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ)

3. ಬಿಬಿಎಂಪಿಯಲ್ಲಿ ಘನತ್ಯಾಜ್ಯ ನಿರ್ವಹಣಾ ವಿಭಾಗದಲ್ಲಿ ಖರೀದಿಸಲಾಗಿರುವ ಟಿಪ್ಪರ್ ಆಟೋಗಳನ್ನು ಬಿಬಿಎಂಪಿ ವ್ಯಾಪ್ತಿಯಲ್ಲಿ ಗುರುತಿಸಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಗಳಿಗೆ ನಿರ್ವಹಣೆಗಾಗಿ ನೀಡುವ ಮೂಲಕ ಪರ್ಯಾಯ ಉದ್ಯೋಗವನ್ನು ಕಲ್ಪಿಸಲು ಹಾಗೂ ವಲಯವಾರು ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಹೊಸದಾಗಿ ಆಟೋ ಟಿಪ್ಪರ್‌ಗಳನ್ನು ಖರೀದಿಸಲು ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ಸಹಯೋಗದೊಂದಿಗೆ ಸಾಲ ಸೌಲಭ್ಯಗಳನ್ನು ಒದಗಿಸಲು ವಿವಿಧ ಯೋಜನೆಗಳನ್ನು ರೂಪಿಸುವ ಬಗ್ಗೆ

**ಚರ್ಚೆ:** ಬೃಹತ್ ಬೆಂಗಳೂರು ಮಹಾನಗರ ಪಾಲಿಕಾ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣಾ ವಿಭಾಗದಲ್ಲಿ ಇರುವಂತಹ ಆಟೋ ಟಿಪ್ಪರ್‌ಗಳನ್ನು ಪರ್ಯಾಯ ಉದ್ಯೋಗದ ಯೋಜನೆಯಡಿಯಲ್ಲಿ ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ನೀಡಲು ದಿನಾಂಕ:19.04.2021 ರಂದು ಸಭೆ ಕರೆದಿದ್ದು, ಪಾಲಿಕೆ ಕಲ್ಯಾಣ ಕಾರ್ಯಕ್ರಮದಡಿಯಲ್ಲಿ ಈಗಾಗಲೇ ಯೋಜನೆಯನ್ನು ರೂಪಿಸಲಾಗಿದೆಯೆಂದು ಸಭೆಗೆ ಹಾಜರಿದ್ದ ಬಿಬಿಎಂ.ಪಿ ಅಧಿಕಾರಿಗಳು ತಿಳಿಸಿರುತ್ತಾರೆ. ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರು, ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ಗುರುತಿಸಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ 2020-21ನೇ ಸಾಲಿನಲ್ಲಿ ಐ.ಎಸ್.ಬಿ ಯೋಜನೆ-561, ನೇರಸಾಲದ ಅಡಿ-350 ಅರ್ಜಿ, ಐರಾವತ ಯೋಜನೆ 81 ಅರ್ಜಿ- ಒಟ್ಟು 922 ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳು ಫಲಾನುಭವಿಗಳನ್ನು ಆಯ್ಕೆ ಮಾಡಿ ಜಿಲ್ಲೆಗಳಿಗೆ ಅನುದಾನವನ್ನು ನೀಡಲಾಗಿರುತ್ತದೆ ಹಾಗೂ ಸದರಿ ವರ್ಷದಲ್ಲೂ ಸಹ ಮತ್ತೊಮ್ಮೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ತಿಳಿಸಿರುತ್ತಾರೆ.

ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಎಂ.ಎಸ್ ಕಾಯ್ದೆ 2013ರ ಕಾಯ್ದೆ ಮತ್ತು ನಿಯಮಗಳ ಪ್ರಕಾರ 9 ತಿಂಗಳೊಳಗಾಗಿ ಅವರಿಗೆ ಕೌಶಲ್ಯ ತರಬೇತಿಯನ್ನು ನೀಡಿ ಪರ್ಯಾಯ ಉದ್ಯೋಗವನ್ನು ಕಲ್ಪಿಸಬೇಕಾಗಿರುತ್ತದೆ. ಆದರೆ, ರಾಜ್ಯದಲ್ಲಿ 2013, 2016 ಮತ್ತು 2018 ರಲ್ಲಿ ಗುರುತಿಸಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಕಡ್ಡಾಯವಾಗಿ ಪರ್ಯಾಯ ಉದ್ಯೋಗ ಕಲ್ಪಿಸಲು ಮಾನ್ಯ ಆಯೋಗದ ಅಧ್ಯಕ್ಷರು ತಿಳಿಸಿರುತ್ತಾರೆ.

**ತೀರ್ಮಾನ:**

1. ಎಂ.ಎಸ್ ಕಾಯ್ದೆ 2013ರ ಪ್ರಕಾರ ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಕಡ್ಡಾಯವಾಗಿ ಕೌಶಲ್ಯ ತರಬೇತಿ ನೀಡಿ ಪರ್ಯಾಯ ಉದ್ಯೋಗವನ್ನು ಕಲ್ಪಿಸಿಕೊಡಲು ಸೂಕ್ತ ಕ್ರಮಕೈಗೊಳ್ಳುವುದು.
2. ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರು, ಎಸ್‌ಎಲ್‌ಬಿಸಿ ಅಧಿಕಾರಿಗಳು ನಿಗಮದ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಿ ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಬ್ಯಾಂಕ್‌ನಿಂದ ಕೂಡಲೇ ಸಾಲ-ಸೌಲಭ್ಯಗಳನ್ನು ನೀಡುವಂತೆ ಕ್ರಮವಹಿಸುವುದು ಹಾಗೂ ಈ ಬಗ್ಗೆ ಮುಂದಿನ ಸಭೆಗೆ ಕೈಗೊಂಡಿರುವ ಕ್ರಮದ ಬಗ್ಗೆ ವರದಿ ನೀಡಲು ತಿಳಿಸಲಾಯಿತು.

(ಕ್ರಮ: ವ್ಯವಸ್ಥಾಪಕ ನಿರ್ದೇಶಕರು, ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ )

4 **ಮ್ಯಾನ್‌ಹೋಲ್‌ನಲ್ಲಿ ಮೃತಪಡಲು ಕಾರಣರಾಗಿರುವವರ ಮೇಲೆ ಎಂ.ಎಸ್‌ಕಾಯ್ದೆ 2013, ಐಪಿಸಿ 304,ಎಸ್‌ಸಿ /ಎಸ್‌ಟಿ ದೌರ್ಜನ್ಯ ತಡೆಕಾಯ್ದೆ 1989 ಮತ್ತು ಪ್ರಕರಣ ದಾಖಲಿಸಿ ಕಾನೂನು ರೀತಿ ಶಿಕ್ಷೆ ನೀಡಿರುವ ಬಗ್ಗೆ. ಸ್ಕ್ಯಾವೆಂಜಿಂಗ್ ಕಾರ್ಯ ನಡೆಯುತ್ತಿರುವ ಕುರಿತು ಸಾರ್ವಜನಿಕರು ಅಥವಾ ಸಂಘಟನೆಗಳು ದೂರು ಸಲ್ಲಿಸಿದ್ದಲ್ಲಿ ಪ್ರಕರಣವನ್ನು ದಾಖಲಿಸದೇ ಇರುವ ಬಗ್ಗೆ**

**ಚರ್ಚೆ:** ರಾಜ್ಯದಲ್ಲಿ ಮ್ಯಾನ್‌ಹೋಲ್ ಸಾವುಗಳನ್ನು ತಡೆಗಟ್ಟುವಲ್ಲಿ ವಿಫಲವಾಗಿದ್ದು, ಸಂಬಂಧಪಟ್ಟ ಅಧಿಕಾರಿಗಳು/ ಗುತ್ತಿಗೆದಾರರಿಗೆ ಶಿಕ್ಷೆಯಾಗುತ್ತಿಲ್ಲವೆಂದು ಇತ್ತೀಚಿನ ಕಲಬುರಗಿ, ರಾಮನಗರ ಪ್ರಕರಣಗಳಲ್ಲಿ ಜಾಮೀನು ಪಡೆದು ಗುತ್ತಿಗೆದಾರರು/ಅಧಿಕಾರಿಗಳು ಹೊರ ಬಂದಿರುತ್ತಾರೆ. ಈ ರೀತಿಯಾಗಿ ಎಲ್ಲಾ ಪ್ರಕರಣಗಳಲ್ಲೂ ಜಾಮೀನು ರಹಿತವಾಗಿದ್ದರೂ, ಸಹ ಜಾಮೀನು ಪಡೆದು ಬರುತ್ತಿರುವ ಪ್ರಕರಣಗಳೇ ಹೆಚ್ಚಾಗಿರುತ್ತವೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಅತಿ ಗಂಭೀರವಾಗಿ ಪ್ರಕರಣವನ್ನು ದಾಖಲಿಸುವಂತೆ ರಾಜ್ಯ ಮೇಲ್ವಿಚಾರಣಾ ಸಮಿತಿ ಸದಸ್ಯರು ಮನವಿ ಸಲ್ಲಿಸಿರುತ್ತಾರೆ.

**ತೀರ್ಮಾನ:** ಮ್ಯಾನ್‌ಹೋಲ್ ದುರಂತಗಳು ಸಂಭವಿಸಿದಲ್ಲಿ 304ಎ ನಲ್ಲಿ ಪ್ರಕರಣವು ದಾಖಲಾಗುತ್ತಿದ್ದು, ಇದರ ಬದಲಾಗಿ ಕಡ್ಡಾಯವಾಗಿ 304-IIಮತ್ತು ಎಂ.ಎಸ್ ಕಾಯ್ದೆ 2013 ಸೆಕ್ಷನ್-22 8, 9 ರ ಪ್ರಕಾರ ಪ್ರಕರಣವನ್ನು ದಾಖಲಿಸಿ, ಕಾಯ್ದೆಯ ಪ್ರಕಾರ ಜಾಮೀನಿಲ್ಲದಂತೆ ಕ್ರಮವಹಿಸುವುದು ಮತ್ತು ಬಾಕಿಯಿರುವ ಎಲ್ಲಾ ಪ್ರಕರಣಗಳಲ್ಲೂ ಸಂಬಂಧಪಟ್ಟವರ ಮೇಲೆ ಕಾನೂನು ರೀತ್ಯಾ ಕ್ರಮಕೈಗೊಳ್ಳಲು ಕ್ರಮವಹಿಸುವುದು.

(**ಕ್ರಮ:** ಮಹಾನಿರೀಕ್ಷಕರು ಮತ್ತು ಮಹಾ ಆರಕ್ಷಕರ ನಿರೀಕ್ಷಕರು)

**5 ಸೆಕ್ಷನ್-24ರನ್ವಯ ಜಿಲ್ಲಾ ಹಾಗೂ ಉಪವಿಭಾಗ ಮಟ್ಟದಲ್ಲಿ ಕಾಲಕಾಲಕ್ಕೆ ಜಿಲ್ಲಾ ಜಾಗೃತಿ ಸಮಿತಿಯ ಸಭೆಯನ್ನು ನಡೆಸಿ ನಡವಳಿಗಳನ್ನು ಕಳುಹಿಸುವ ಬಗ್ಗೆ.**

**ಚರ್ಚೆ:** ಆಯೋಗವು ಸುಮಾರು ಜಿಲ್ಲೆಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಜಿಲ್ಲಾ ಮತ್ತು ಉಪವಿಭಾಗ ಮಟ್ಟದಲ್ಲಿ ಕಾಲಕಾಲಕ್ಕೆ ಜಿಲ್ಲಾ ಜಾಗೃತಿ ಸಮಿತಿ ಸಭೆಯನ್ನು ನಡೆಸಿಲ್ಲದಿರುವುದು ಕಂಡುಬಂದಿದ್ದು, ನಿಗದಿತ ಅವಧಿಯಲ್ಲಿ ಸಮಿತಿ ಸಭೆಗಳು ನಡೆಸದಿರುವ ಕಾರಣ ಪುನರ್ವಸತಿ ಕಲ್ಪಿಸಲು ಸಾಧ್ಯವಾಗಿರುವುದಿಲ್ಲವೆಂದು ಅಧ್ಯಕ್ಷರು ಸಭೆಗೆ ತಿಳಿಸಿದರು. ಜಿಲ್ಲೆಯಲ್ಲಿ ಬಹುಮುಖ್ಯವಾಗಿ ಎಂ.ಎಸ್ ಕಾಯ್ದೆ 2013ರ ಪ್ರಕಾರ ಎಲ್ಲಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು ಜಿಲ್ಲಾಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ. ಸಮಾಜ ಕಲ್ಯಾಣ ಇಲಾಖೆಯಿಂದ ನಿರ್ದಿಷ್ಟ ಅಧಿಕಾರಿಗಳು ಯಾವ ಸೌಲಭ್ಯಗಳನ್ನು ಒದಗಿಸಬೇಕು ಎಂಬುದರ ಬಗ್ಗೆ ಹಾಗೂ ಪ್ರತಿ 3 ತಿಂಗಳಿಗೊಮ್ಮೆ ಪುನರ್ವಸತಿ ಕಲ್ಪಿಸಿರುವ ಕುರಿತು ಮಾನ್ಯ ಜಿಲ್ಲಾಧಿಕಾರಿಗಳು ಪರಿಶೀಲನೆ ನಡೆಸಿ ಕ್ರಮಕೈಗೊಳ್ಳಬೇಕಾಗಿರುತ್ತದೆ. ಈ ರೀತಿಯಾಗಿ ಪ್ರತಿ ಮಾಹೆ ಎಂ. ಎಸ್ ಕಾಯ್ದೆ 2013ರಲ್ಲಿ ಮತ್ತು 2016 ರಲ್ಲಿ ಗುರುತಿಸಿದಂತ ಎಲ್ಲಾ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಮತ್ತು ಅವರ ಕುಟುಂಬದ ಅವಲಂಬಿತರಿಗೆ ಪುನರ್ವಸತಿ ಕಲ್ಪಿಸಬಹುದಾಗಿರುತ್ತದೆ ಹಾಗೂ ಸಂಭವಿಸುತ್ತಿರುವ ಮ್ಯಾನ್‌ಹೋಲ್ ಸಾವಿನ ಪ್ರಕರಣಗಳನ್ನು ತಡೆಗಟ್ಟಲು ಸಮಿತಿ ಕ್ರಿಯಾಶೀಲವಾಗಬೇಕು ಎಂದು ಆಯೋಗದ ಮತ್ತು ನಿಗಮದ ಅಧ್ಯಕ್ಷರು ತಿಳಿಸಿರುತ್ತಾರೆ.

**ತೀರ್ಮಾನ:**

1. ಕಂದಾಯ ಇಲಾಖೆಯ ಮುಖ್ಯಸ್ಥರು ಜಿಲ್ಲಾಧಿಕಾರಿಗಳಿಗೆ ಜಿಲ್ಲಾ ಜಾಗೃತಿ ಸಮಿತಿ ಸಭೆಗಳನ್ನು ನಿಗದಿತ ಅವಧಿಯಲ್ಲಿ ನಡೆಸಿ ಸಮಿತಿ ಕ್ರಿಯಾಶೀಲವಾಗುವಂತೆ ಕೈಗೊಳ್ಳಲು ಸುತ್ತೋಲೆಗಳನ್ನು ಹೊರಡಿಸಲು ಕ್ರಮವಹಿಸುವುದು.
2. ಜಿಲ್ಲಾಧಿಕಾರಿಗಳು ನಗರ ಮತ್ತು ಗ್ರಾಮೀಣ ಭಾಗದಲ್ಲಿ ಗುರುತಿಸಿರುವ ಎಲ್ಲಾ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಕಾಯ್ದೆಯ ಪ್ರಕಾರ ಪುನರ್ವಸತಿಯನ್ನು ಕಲ್ಪಿಸಲು ಕ್ರಮವಹಿಸುವುದು ಕೈಗೊಂಡಿರುವ ಕ್ರಮದ ಬಗ್ಗೆ ಆಯೋಗಕ್ಕೆ ಕೂಡಲೇ ಮಾಹಿತಿಯನ್ನು ಕಳುಹಿಸುವುದು.

**(ಕ್ರಮ: ಕಂದಾಯ ಇಲಾಖೆ, ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು)**

**ವಿಷಯ-6: ಬೆಂಗಳೂರು ಮಹಾನಗರ ಪಾಲಿಕೆ ಮತ್ತು ನಗರದ ಇತರೆ ಸ್ಥಳಗಳ ಖಾಸಗಿ ಎಸ್.ಟಿ.ಪಿ ಪ್ಲಾಂಟ್‌ಗಳನ್ನು ಸ್ವಚ್ಛಗೊಳಿಸಲು ಹೋಗಿ ಮೃತಪಡುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ, ಸದರಿ ಎಸ್.ಟಿ.ಪಿ ಪ್ಲಾಂಟ್‌ಗಳ ಮುಂದೆ "ಅಪಾಯಕಾರಿ" ಎಂದು ನಾಮಫಲಕಗಳನ್ನು ಅಳವಡಿಸುವುದು.**

**ಚರ್ಚೆ:** ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಎಸ್‌ಟಿಪಿ ಪ್ಲಾಂಟ್‌ಗಳಲ್ಲಿ ಮೃತಪಡುವ ಪ್ರಕರಣಗಳು ಹೆಚ್ಚಾಗಿದ್ದು ಈ ಬಗ್ಗೆ ಹಿಂದಿನ ಸಭೆಯಲ್ಲಿ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. ಈ ಬಗ್ಗೆ ಕಡ್ಡಾಯವಾಗಿ ಎಸ್‌ಟಿಪಿ ಪ್ಲಾಂಟ್‌ಗಳ ಮುಂದೆ "ಅಪಾಯಕಾರಿ" ಎಂದು ನಾಮಫಲಕಗಳನ್ನು ಅಳವಡಿಸಿರುವ ಬಗ್ಗೆ ಯಾವುದೇ ಮಾಹಿತಿಯನ್ನು ಸಲ್ಲಿಸಿರುವುದಿಲ್ಲ. ರಾಜ್ಯದಲ್ಲಿ ಇರುವ ಎಸ್‌ಟಿಪಿ ಪ್ಲಾಂಟ್‌ಗಳ ಬಗ್ಗೆ ನಿಖರವಾದ ಮಾಹಿತಿಯನ್ನೂ ಸಹ ನೀಡಿರುವುದಿಲ್ಲ ಎಂದು ರಾಜ್ಯ ಮೇಲ್ವಿಚಾರಣಾ ಸಮಿತಿಯ ನಾಮನಿರ್ದೇಶನ ಸದಸ್ಯರು ತಿಳಿಸಿರುತ್ತಾರೆ.

**ತೀರ್ಮಾನ:**

ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯು ಹಾಗೂ ಬಿಡಬ್ಲ್ಯೂಎಸ್‌ಎಸ್‌ಬಿ ರವರು ಮಹಾನಗರ ಪಾಲಿಕಾ ವ್ಯಾಪ್ತಿಯಲ್ಲಿರುವ ಎಸ್‌ಟಿಪಿ ಪ್ಲಾಂಟ್‌ಗಳನ್ನು ಪಟ್ಟಿ ಮಾಡಿ ಅವುಗಳ ಮುಂದೆ ಕಡ್ಡಾಯವಾಗಿ "ಅಪಾಯಕಾರಿ" ನಾಮಫಲಕಗಳನ್ನು ಅಳವಡಿಸಿ 15 ದಿನಗಳೊಳಗಾಗಿ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗಕ್ಕೆ ವರದಿ ಸಲ್ಲಿಸಲು ನಿರ್ದೇಶಿಸಲಾಯಿತು.

(**ಕ್ರಮ:** ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಬಿ.ಡಬ್ಲ್ಯೂ.ಎಸ್.ಎಸ್.ಬಿ)

**ವಿಷಯ-7: ಸಕ್ಕಿಂಗ್ ಮತ್ತು ಜಟ್ಟಿಂಗ್ ಯಂತ್ರಗಳನ್ನು ಹೊಂದಿರುವ ಖಾಸಗಿಯವರು ಸ್ವಚ್ಛತಾ ಸೇವೆಗೆ ಹೆಚ್ಚಿನದರವನ್ನು ವಿಧಿಸುತ್ತಿದ್ದು, ಬಿ.ಡಬ್ಲ್ಯೂ.ಎಸ್.ಎಸ್.ಬಿ ಹಾಗೂ ನಗರಾಭಿವೃದ್ಧಿ ಇಲಾಖೆಯವರು ಖಾಸಗಿ ಸಂಸ್ಥೆಗಳ ಪಟ್ಟಿಯನ್ನು ತಯಾರಿಸಿ ಅವರು ನೀಡುವ ಸೇವೆಗೆ ಶುಲ್ಕವನ್ನು ನಿಗದಿಪಡಿಸುವ ಬಗ್ಗೆ.**

**ಚರ್ಚೆ:** ಬಿ.ಡಬ್ಲ್ಯೂ.ಎಸ್.ಎಸ್.ಬಿ ವ್ಯಾಪ್ತಿಯಲ್ಲಿ ದರವನ್ನು ನಿಗದಿಪಡಿಸಿ ಸಕ್ಕಿಂಗ್, ಜಟ್ಟಿಂಗ್ ಮೆಷಿನ್‌ಗಳನ್ನು ಉಪಯೋಗಿಸಲಾಗುತ್ತಿದೆ ಎಂದು ಸಭೆಗೆ ಮಾಹಿತಿ ನೀಡಿದರು. ಸದರಿ ವಿಚಾರವಾಗಿ ನಾಮನಿರ್ದೇಶನ ಸದಸ್ಯರು ಗ್ರಾಮೀಣ ಭಾಗಗಳಲ್ಲಿ ಸಕ್ಕಿಂಗ್ ಮತ್ತು ಜೆಟ್ಟಿಂಗ್ ಯಂತ್ರಗಳ ಕೊರತೆ ಹೆಚ್ಚಾಗಿದ್ದು, ಹಲವು ಗ್ರಾಮಪಂಚಾಯಿತಿಗಳು ಅತಿ ಹೆಚ್ಚು ಜನಸಂಖ್ಯೆ ಹೊಂದಿದ್ದು, ಇಲ್ಲಿ ಅತಿ ಹೆಚ್ಚು ಸಮಸ್ಯೆಗಳು ಉಂಟಾಗಿರುತ್ತವೆ. ಕೂಡಲೇ ಇಂತಹ ಗ್ರಾಮಪಂಚಾಯಿತಿಯಲ್ಲಿ ಸಕ್ಕಿಂಗ್, ಜಟ್ಟಿಂಗ್ ಯಂತ್ರಗಳನ್ನು ತಾಲ್ಲೂಕು ಮಟ್ಟದಲ್ಲಿ ಖರೀದಿ ಮಾಡಬೇಕಾಗಿರುತ್ತದೆ. ಸದರಿ ವಿಚಾರವಾಗಿ ಅಥವಾ ಗ್ರಾಮಸಭೆಗಳಲ್ಲಿ ಅನುಮೋದನೆಯು ಯಾವುದೇ ಅವಶ್ಯವಿರುವುದಿಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

**ತೀರ್ಮಾನ:**

1. ಪ್ರತಿ ತಾಲ್ಲೂಕು ಮಟ್ಟದಲ್ಲಿ ಸಕ್ಕಿಂಗ್, ಜಟ್ಟಿಂಗ್ ಯಂತ್ರಗಳನ್ನು ಖರೀದಿ ಮಾಡಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯವರು ಕ್ರಮವಹಿಸುವುದು. ಸಿಂಗಲ್ ಪಿಟ್ ನಿರ್ಮಾಣವಾಗಿರುವುದರಿಂದ ಅತಿ ಬೇಗನೆ ಪಿಟ್ ತುಂಬುವ ಹಿನ್ನೆಲೆಯಲ್ಲಿ ಸಕ್ಕಿಂಗ್, ಜಟ್ಟಿಂಗ್ ಯಂತ್ರಗಳನ್ನು ಉಪಯೋಗಿಸುವಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು.
2. ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬಳಕೆಯಾಗುತ್ತಿರುವ ಸಕ್ಕಿಂಗ್, ಜಟ್ಟಿಂಗ್ ಯಂತ್ರಗಳನ್ನು ಪಟ್ಟಿ ಮಾಡಿ ನಿಗದಿತ ದರವನ್ನು ನಿಗದಿಗೊಳಿಸಿ ಬಳಕೆಯಾಗುತ್ತಿರುವುದರ ಬಗ್ಗೆ

ಜಿಲ್ಲಾ ಜಾಗೃತಿ ಸಮಿತಿ ಸಭೆಗಳಲ್ಲಿ ಚರ್ಚಿಸುವುದು ಹಾಗೂ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅವಶ್ಯಕತೆಗಳಗನುಗುಣವಾಗಿ ಸಕ್ಕಿಂಗ್, ಜಟ್ಟಿಂಗ್ ಯಂತ್ರಗಳನ್ನು ಖರೀದಿಸಲು ಕ್ರಮವಹಿಸುವುದು.

(**ಕ್ರಮ:**ಬಿ.ಡಬ್ಲ್ಯೂ.ಎಸ್.ಎಸ್.ಬಿ, ಪೌರಾಡಳಿತ ನಿರ್ದೇಶನಾಲಯ, ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು)

**ವಿಷಯ-8: ಬಿ.ಡಬ್ಲ್ಯೂ.ಎಸ್.ಎಸ್.ಬಿ ಮುಖಾಂತರ ತರಬೇತಿ ಹೊಂದಿ ಸರ್ಟಿಫಿಕೇಟ್ ಪಡೆದಿರುವಂತಹ ಕಾರ್ಮಿಕರಿಗೆ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದಿಂದ ಸಕ್ಕಿಂಗ್ ಮತ್ತು ಜಟ್ಟಿಂಗ್ ಯಂತ್ರಗಳನ್ನು ಒದಗಿಸುವ ಬಗ್ಗೆ.**

**ಚರ್ಚೆ:** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಈಗಾಗಲೇ 320 ಪೇ & ಯೂಸ್ ಶೌಚಾಲಯಗಳ ನಿರ್ವಹಣೆಯನ್ನು ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಅವಲಂಬಿತರಿಗೆ ನೀಡುವಂತೆ ಒಂದು ವರ್ಷಗಳ ಹಿಂದೆ ನಿರ್ದೇಶಿಸಲಾಗಿರುತ್ತದೆ ಎಂದು ರಾಷ್ಟ್ರೀಯ ಸಫಾಯಿ ಕರ್ಮಚಾರಿ ಆಯೋಗದ ಮಾಜಿ ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.

ಈವರೆಗೂ ಈ ಶೌಚಾಲಯಗಳನ್ನು ನೀಡಲು ಯಾವುದೇ ಕ್ರಮಕೈಗೊಂಡಿರುವುದಿಲ್ಲ ಹಾಗೂ ಇನ್ಫೋಸಿಸ್ ಸಂಸ್ಥೆಯವರಿಂದ ಮಹಾನಗರ ಪಾಲಿಕೆಯಲ್ಲಿ 600ಕ್ಕೂ ಹೆಚ್ಚು ಶೌಚಾಲಯಗಳನ್ನು ನಿರ್ಮಿಸಲಾಗುತ್ತಿದ್ದು, ಸದರಿ ಎಲ್ಲಾ ಶೌಚಾಲಯಗಳ ನಿರ್ವಹಣೆಯನ್ನು ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಅವಲಂಬಿತರಿಗೆ ನೀಡಲು ನಿರ್ದೇಶನ ನೀಡಬೇಕೆಂದು ಆಯೋಗದ ಮಾಜಿ ಅಧ್ಯಕ್ಷರು ಕೋರಿದರು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವ್ಯಾಪ್ತಿಯಲ್ಲಿ ಅತಿ ಹೆಚ್ಚು ಸಮಸ್ಯೆಗಳಿದ್ದು ಪ್ರತ್ಯೇಕವಾಗಿ ಸಭೆಯನ್ನು ಆಯೋಜಿಸುವಂತೆ ಮಾನ್ಯ ಆಯೋಗದ ಅಧ್ಯಕ್ಷರು ಮನವಿ ಸಲ್ಲಿಸಿದರು. ನಗರ ಸ್ಥಳೀಯ ಸಂಸ್ಥೆಗಳಲ್ಲಿ ನಿರ್ಮಾಣವಾಗಿ ಪೇ & ಯೂಸ್ ಸುಲಭ ಶೌಚಾಲಯಗಳನ್ನು ಖಾಸಗಿಯವರಿಗೆ ಟೆಂಡರ್ ಮೂಲಕ ನೀಡುತ್ತಿದ್ದು, ಇದರ ಬದಲಾಗಿ ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್/ಸಫಾಯಿ ಕರ್ಮಚಾರಿಗಳ ಅವಲಂಬಿತರಿಗೆ ನೀಡಿದಲ್ಲಿ ಅವರಿಗೆ ಪರ್ಯಾಯ ಉದ್ಯೋಗ ಕಲ್ಪಿಸಿದಂತಾಗುತ್ತದೆ ಎಂದು ಆಯೋಗದ ಮಾಜಿ ಅಧ್ಯಕ್ಷರು ಕೋರಿದರು.

**ತೀರ್ಮಾನ:** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ನಿರ್ಮಿಸಲಾಗಿರುವ ಪೇ & ಯೂಸ್ ಶೌಚಾಲಯಗಳನ್ನು ಮ್ಯಾನ್ಯುಯಲ್ ಸ್ಕ್ಯಾವೆಂಜರ್/ ಸಫಾಯಿ ಕರ್ಮಚಾರಿಗಳ ಅವಲಂಬಿತರ ಸೊಸೈಟಿ ಸ್ಥಾಪಿಸಿ ಆ ಸೊಸೈಟಿ ಮೂಲಕ ವಿತರಿಸಲು ಕ್ರಮವಹಿಸುವುದು.

(**ಕ್ರಮ:** ಪೌರಾಡಳಿತ ನಿರ್ದೇಶನಾಲಯ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ)

**ವಿಷಯ-9: ಮ್ಯಾನ್‌ಹೋಲ್‌ನಲ್ಲಿ ಮೃತಪಟ್ಟ ಕುಟುಂಬದ ಅವಲಂಬಿತರಿಗೆ ಮಾಸಿಕ ಪಿಂಚಣಿ ಸೌಲಭ್ಯ, ವಿಶೇಷ ಆರೋಗ್ಯ ಸೌಲಭ್ಯ ಮತ್ತು ಅನುಕಂಪದ ನೇಮಕಾತಿ ಸೌಲಭ್ಯ ಕಲ್ಪಿಸುವ ಬಗ್ಗೆ.**

**ಚರ್ಚೆ:** ಹಿಂದಿನ ಸಭೆಯ ಸಭಾ ನಡವಳಿಯಂತೆ ಪೌರಾಡಳಿತ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರು ಮ್ಯಾನ್‌ಹೋಲ್‌ನಲ್ಲಿ ಮೃತಪಟ್ಟ ಕುಟುಂಬದ ಅವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿಯನ್ನು ಕಲ್ಪಿಸಲು ಪ್ರಸ್ತಾವನೆಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಕಳುಹಿಸಲಾಗಿರುತ್ತದೆ. ಆದರೆ, ದಿನಾಂಕ:22.02.2021 ರಂದು ನಡೆದ ಮಾನ್ಯ ಮುಖ್ಯಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಅನುಕಂಪದ ಆಧಾರದ

ಮೇಲೆ ನೇಮಕಾತಿಯನ್ನು ಕಲ್ಪಿಸಲು ಕಾಯ್ದೆಯಲ್ಲಿ ಸಾದ್ಯವಿರುವುದಿಲ್ಲವೆಂದು ತೀರ್ಮಾನಿಸಲಾಗಿರುವ ಅಭಿಪ್ರಾಯವನ್ನು ಪೌರಾಡಳಿತ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಹಾಜರಿದ್ದ ಅಧಿಕಾರಿಗಳು ತಿಳಿಸಿರುತ್ತಾರೆ.

**ತೀರ್ಮಾನ:**

1. ಮ್ಯಾನ್‌ಹೋಲ್‌ನಲ್ಲಿ ಮೃತಪಟ್ಟಂತಹ ಪ್ರಕರಣಗಳಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿಯನ್ನು ಕಲ್ಪಿಸುವ ಸಂಬಂಧ ಪೌರಾಡಳಿತ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಯವರು ಒಂದು ವಾರದ ಒಳಗಾಗಿ ಸಮಾಜ ಕಲ್ಯಾಣ ಇಲಾಖೆಗೆ ಸೂಕ್ತ ಪ್ರಸ್ತಾವನೆಯನ್ನು ಸಿದ್ಧಪಡಿಸಿ ಕಳುಹಿಸುವುದು ಹಾಗೂ ಸಮಾಜ ಕಲ್ಯಾಣ ಇಲಾಖೆಯಿಂದ ಸಚಿವ ಸಂಪುಟದಲ್ಲಿ ಮಂಡಿಸಲು ಕಡತವನ್ನು ಸಿದ್ಧಪಡಿಸಿ ಕಳುಹಿಸುವುದು.
2. ಅನುಕಂಪದ ಆಧಾರದ ಮೇಲೆ ನೇಮಕಾತಿ ನೀಡುವವರೆಗೂ ಆಯಾ ಇಲಾಖೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಖಾಲಿಯಿರುವ ಹುದ್ದೆಗಳನ್ನು ಅವರ ಅವಲಂಬಿತರಿಗೆ ಕಲ್ಪಿಸಲು ಕ್ರಮವಹಿಸುವುದು ಹಾಗೂ ಈ ಬಗ್ಗೆ ಕೂಡಲೇ ಆಯೋಗಕ್ಕೆ ವರದಿ ಸಲ್ಲಿಸುವುದು.
3. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಮೃತಪಟ್ಟಂತಹ ಕುಟುಂಬದ ಅವಲಂಬಿತರಿಗೆ ಸಮಾಜ ಕಲ್ಯಾಣ ಇಲಾಖೆಯ ವಸತಿ ಶಾಲೆಗಳಲ್ಲಿ ಅಥವಾ ಹಾಸ್ಟೆಲ್‌ಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಉದ್ಯೋಗ ಕಲ್ಪಿಸಿಕೊಡಲು ಕ್ರಮವಹಿಸುವುದು.

(**ಕ್ರಮ:** ಪೌರಾಡಳಿತ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಸಮಾಜ ಕಲ್ಯಾಣ ಇಲಾಖೆ)

**ವಿಷಯ–10: ಬೆಂಗಳೂರು ಗ್ರಾಮಾಂತರಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನಲ್ಲಿ ನಿರ್ಮಿಸಲಾಗಿರುವ FecalSludge Management ಸಂಸ್ಕರಣಾ ಘಟಕದಂತೆ ರಾಜ್ಯದ ಎಲ್ಲಾ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಘಟಕಗಳನ್ನು ಸ್ಥಾಪಿಸುವ ಬಗ್ಗೆ.**

**ಚರ್ಚೆ:** ಪೌರಾಡಳಿತ ಇಲಾಖೆಯಿಂದ ಮೊದಲನೇ ಹಂತದಲ್ಲಿ 51 ಪಟ್ಟಣ ಪಂಚಾಯಿತಿಗಳಲ್ಲಿ 167 ಕೋಟಿ ವೆಚ್ಚದಲ್ಲಿ Fecal Sludge Managementಯೋಜನೆ ರೂಪಿಸಲಾಗಿರುತ್ತದೆ ಮತ್ತು 2ನೇ ಹಂತದಲ್ಲಿ 101 ಪಟ್ಟಣಗಳನ್ನು ಆಯ್ಕೆ ಮಾಡಿದ್ದು ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. ಗ್ರಾಮೀಣ ಭಾಗದಲ್ಲಿ 17 ಘಟಕಗಳ ನಿರ್ಮಾಣಕ್ಕೆ ಪ್ರಾರ್ಥಮಿಕ ಸಮೀಕ್ಷೆ ನಡೆಸಿ ತಾಂತ್ರಿಕ ಸಮಿತಿ ಅನುಮೋದನೆ ಪಡೆದು ಕಾಮಗಾರಿಗಳು ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ ಎಂದು ತಿಳಿಸಿರುತ್ತಾರೆ ಹಾಗೂ 6 ಗ್ರಾಮೀಣ ಭಾಗದ ಜಿಲ್ಲೆಗಳಲ್ಲಿ ಕಾಮಗಾರಿ ಪ್ರಗತಿಯಲ್ಲಿರುತ್ತದೆ ಎಂದು ತಿಳಿಸಿರುತ್ತಾರೆ.

**ತೀರ್ಮಾನ:** ರಾಜ್ಯದ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ Fecal Sludge Management ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲು ಕ್ರಮವಹಿಸುವುದು.

(**ಕ್ರಮ:** ಪೌರಾಡಳಿತ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)

**ವಿಷಯ–11: ಮ್ಯಾನ್‌ಹೋಲ್/ಯುಜಿಡಿ/ಸೆಪ್ಟಿಕ್ ಟ್ಯಾಂಕ್‌ಗಳನ್ನು ಸ್ವಚ್ಛಗೊಳಿಸಲು ಪೌರಕಾರ್ಮಿಕರ ಸೇವೆಯ ಬದಲಾಗಿ ಹೈದರಾಬಾದ್ ವಾಟರ್ ಸಪ್ಲೈಯಲ್ಲಿ ಬಳಸುತ್ತಿರುವ ಸಕ್ಕಿಂಗ್, ಜಟ್ಟಿಂಗ್ ಯಂತ್ರಗಳು ಮತ್ತು ಕೇರಳದ ರೋಬೋಟ್ ತಂತ್ರಜ್ಞಾನವನ್ನು ಅನುಷ್ಠಾನಗೊಳಿಸುವ ಬಗ್ಗೆ.**

**ಚರ್ಚೆ**: ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗ ಮತ್ತು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಸಹಯೋಗದೊಂದಿಗೆ ಒಳಚರಂಡಿಗಳನ್ನು ಸ್ವಚ್ಛಗೊಳಸಲು ಸಕ್ಕಿಂಗ್, ಜಟ್ಟಿಂಗ್ ಹಾಗೂ ಸುರಕ್ಷತಾ ಪರಿಕರಗಳ ಉಪಯೋಗಿಸುವ ಕುರಿತು 12 ದಿನಗಳ ಕಾಲ ತರಬೇತಿಯನ್ನು ಆಯೋಜಿಸಲಾಗಿರುತ್ತದೆ ಹಾಗೂ ಸದರಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ತರಬೇತಿಯನ್ನು ನೀಡಲಾಗಿರುತ್ತದೆ. ಆದರೆ, ಈವರೆಗೂ ಪರ್ಯಾಯ ಉದ್ಯೋಗವನ್ನು ಕಲ್ಪಿಸಲು ಸಾಧ್ಯವಾಗಿರುವುದಿಲ್ಲ. ಹೈದರಾಬಾದ್‌ನಲ್ಲಿ ಸಫಾಯಿ ಕರ್ಮಚಾರಿ ಸೊಸೈಟಿಗಳಿಗೆ 75% ಸಬ್ಸಿಡಿ ದರದಲ್ಲಿ ಸಕ್ಕಿಂಗ್, ಜಟ್ಟಿಂಗ್ ಯಂತ್ರಗಳನ್ನು ಖರೀದಿ ಮಾಡಲು ತೆಲಂಗಾಣ ಸಮಾಜ ಕಲ್ಯಾಣ ಇಲಾಖೆಯು ಅನುದಾನ ನೀಡಿರುತ್ತದೆ. ಅದರಂತೆ ಕರ್ನಾಟಕ ರಾಜ್ಯದಲೂ ಸಫಾಯಿ ಕರ್ಮಚಾರಿ/ ಮ್ಯಾನ್ಯುಯಲ್ ಸ್ಕಾವೆಂಜರ್‌ಗಳಿಗೆ, ಅವಲಂಬಿತರ ಸೊಸೈಟಿಗಳಿಗೆ ಸಕ್ಕಿಂಗ್, ಜಟ್ಟಿಂಗ್ ಯಂತ್ರಗಳನ್ನು ಖರೀದಿ ಮಾಡಲು ಅವಕಾಶ ಕಲ್ಪಿಸಿಕೊಡಬೇಕು. ಈ ಬಗ್ಗೆ ಯಾವುದೇ ಕ್ರಮ ಆಗಿರುವುದಿಲ್ಲ ವೆಂದು ಮಾಜಿ ಸದಸ್ಯರು, ರಾಷ್ಟ್ರಿಯ ಸಫಾಯಿ ಕರ್ಮಚಾರಿ ಆಯೋಗ ರವರು ತಿಳಿಸಿರುತ್ತಾರೆ.

**ತೀರ್ಮಾನ**: ರಾಜ್ಯದಲ್ಲಿ ಈಗಾಗಲೇ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಡಿ ಮಂಡಳಿ ಯವರು ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್/ಸಫಾಯಿ ಕರ್ಮಚಾರಿಗಳು ತರಬೇತಿ ನೀಡಿ ಸಂಘವನ್ನು ನೋಂದಣಿ ಮಾಡಲಾಗಿರುತ್ತದೆ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದವರು ಎನ್‌ಜಿಓಗಳ ಸಹಾಯವನ್ನು ಪಡೆದು ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಸೊಸೈಟಿ ಸ್ಥಾಪಿಸಿ ಅವರಿಗೆ ನಿಗಮದ ವತಿಯಿಂದ 75% ರಷ್ಟು ಸಬ್ಸಿಡಿ ದರದಲ್ಲಿ ಸಕ್ಕಿಂಗ್, ಜಟ್ಟಿಂಗ್ ಯಂತ್ರಗಳನ್ನು ಖರೀದಿಸಲು ಕ್ರಮವಹಿಸುವುದು.

(**ಕ್ರಮ:** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ)

**ವಿಷಯ-12: ಬಿಬಿಎಂಪಿ ಒಳಗೊಂಡಂತೆ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು ನೇರ ಪಾವತಿ ಅಥವಾ ನೇರ ನೇಮಕಾತಿಗೊಳಸುವ ಬಗ್ಗೆ.**

**ಚರ್ಚೆ**: ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು (ಬಿಬಿಎಂಪಿ ಹೊರತುಪಡಿಸಿ) ಪೌರಕಾರ್ಮಿಕರ ವಿಶೇಷ ನೇಮಕಾತಿ ಪ್ರಕ್ರಿಯೆಯಲ್ಲಿ ನೇಮಕಾತಿ ಮೂಲಕ ಭರ್ತಿ ಮಾಡಿ, ಭರ್ತಿಯಾಗದೇ ಉಳಿದ ಹುದ್ದೆಗಳಿಗೆ ರೋಸ್ಟರ್ ನಿಯಮಕ್ಕೆ ವಿನಾಯಿತಿ ನೀಡುವ ಕುರಿತು ದಿನಾಂಕ:19.01.2021 ರಲ್ಲಿ ಏಕ ಕಡತ ಪದ್ಧತಿಯಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. ಆದರೆ ಕಾರಣಾಂತರಗಳಿಂದ ಪ್ರಸ್ತಾವನೆಯು ಹಿಂದಿರುಗಿಸಲ್ಪಟ್ಟಿರುತ್ತದೆ. ಸದರಿ ಪ್ರಸ್ತಾವನೆಯನ್ನು ಸಚಿವ ಸಂಪುಟದಲ್ಲಿಟ್ಟು ತೀರ್ಮಾನ ಕೈಗೊಳ್ಳಬೇಕಾಗಿರುತ್ತದೆ ಎಂದು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ರವರು ತಿಳಿಸಿರುತ್ತಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಈಗಾಗಲೇ 4000 ಹುದ್ದೆಗಳು ಮಂಜೂರಾಗಿರುತ್ತವೆ. 16000 ಹುದ್ದೆಗಳು ಕಾರ್ಯನಿರ್ವಹಿಸುತ್ತಿದ್ದು, ಎಲ್ಲಾ ಪೌರಕಾರ್ಮಿಕರನ್ನು ಖಾಯಂಗೊಳಸುವ ಸಂಬಂಧ ಮಾನ್ಯ ಕಂದಾಯ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಕೈಗೊಳ್ಳಲಾಗಿರುತ್ತದೆ ಹಾಗೂ ಸದರಿ ಎಲ್ಲಾ ಪೌರಕಾರ್ಮಿಕರ ವಯೋಮಿತಿಯು 45 ವರ್ಷಗಳಿಂದ 55 ವರ್ಷಗಳಿಗೆ ಹೆಚ್ಚಿಸುವ ಬಗ್ಗೆಯೂ ಸಹ ಚರ್ಚಿಸಲಾಗಿ ಸದರಿ ವಿಚಾರವನ್ನು ಸಚಿವ ಸಂಪುಟದಲ್ಲಿ ತಂದು ಸರ್ಕಾರದ ಹಂತದಲ್ಲಿ 2 ತಿಂಗಳ ಒಳಗಾಗಿ ಕ್ರಮಕೈಗೊಳ್ಳಲಾಗುವುದು ಎಂದು ವಿಶೇಷ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯವರು ತಿಳಿಸಿದರು.

**ತೀರ್ಮಾನ:**

ಪೌರಕಾರ್ಮಿಕರ ನೇರ ನೇಮಕಾತಿ ಸಂಬಂಧ ಕಡತವನ್ನು ಅತಿ ತುರ್ತಾಗಿ ಸಚಿವ ಸಂಪುಟಕ್ಕೆ ತರಲು ಪೌರಾಡಳಿತ ನಿರ್ದೇಶನಾಲಯವು ಕ್ರಮವಹಿಸುವುದು. ಬಿಬಿಎಂಪಿ ಅಧಿಕಾರಿಗಳು ಮತ್ತೊಂದು ಸಭೆಯನ್ನು ನಡೆಸಿ ಸಭೆಯಲ್ಲಿ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು.

(ಕ್ರಮ: ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ)

**ವಿಷಯ-13: ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳು ಮತ್ತುಗ್ರಾಮೀಣ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಕೋವಿಡ್-19 ಹಿನ್ನೆಲೆಯಲ್ಲಿ ಕೈಗೊಂಡಿರುವ ಸುರಕ್ಷತಾ ಕ್ರಮಗಳ ಬಗ್ಗೆ ಹಾಗೂ ಕೋವಿಡ್‌ನಿಂದ ಮೃತಪಟ್ಟಲ್ಲಿ ಸರ್ಕಾರದ ಆದೇಶದನ್ವಯ ಪರಿಹಾರವನ್ನು ನೀಡಿರುವ ಬಗ್ಗೆ.**

**ಚರ್ಚೆ:** ಕೋವಿಡ್-19 ಲಾಕ್‌ಡೌನ್ ಸಂದರ್ಭದಲ್ಲಿ ಪೌರಕಾರ್ಮಿಕರು ಹಾಗೂ ಇತರೆ ಸ್ವಚ್ಛತಾ ಕೆಲಸಗಾರರಿಗೆ ವಿಶೇಷ ಕಾಳಜಿವಹಿಸುವಂತೆ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೆ ಅನೇಕ ಪತ್ರಗಳು ಹಾಗೂ ಸುತ್ತೋಲೆಗಳಲ್ಲಿ ಅಗತ್ಯ ಸೂಚನೆಗಳನ್ನು ನೀಡಲಾಗಿರುತ್ತದೆ. ಅವರ ಸುರಕ್ಷತೆಗೆ ಮಾಸ್ಕ್, ಹ್ಯಾಂಡ್‌ಗ್ಲೋವ್ಸ್, ಸಮವಸ್ತ್ರ, ಗೌನ್ ಹಾಗೂ ಇತರೆ ಸುರಕ್ಷತಾ ಧಿರಿಸುಗಳನ್ನು ಕಡ್ಡಾಯವಾಗಿ ನೀಡಲಾಗಿದ್ದು, ಕರೋನಾ ವೈರಸ್ ಸೋಂಕಿತರಿಗೆ ಅಗತ್ಯ ಚಿಕಿತ್ಸೆ ಒದಗಿಸಲು ಕ್ರಮವಹಿಸಲಾಗಿರುತ್ತದೆ ಎಂದು ಹೇಳಿದರು.

**ತೀರ್ಮಾನ:**

1. ಕೋವಿಡ್ ಸಮಯದಲ್ಲಿ ಕೋವಿಡ್‌ನಿಂದಾಗಿ ಮೃತಪಟ್ಟ ಎಲ್ಲಾ ಪೌರಕಾರ್ಮಿಕರಿಗೆ ಸರ್ಕಾರದಿಂದ ರೂ. 30.00 ಲಕ್ಷಗಳನ್ನು ಪಾವತಿ ಮಾಡಲು ಕ್ರಮಕೈಗೊಳ್ಳುವುದು.
2. ಕೋವಿಡ್ ಸಮಯದಲ್ಲಿ ಕೋವಿಡ್ ಅಲ್ಲದೆ ಮೃತಪಟ್ಟಂತಹ ಪೌರಕಾರ್ಮಿಕರ ಕುಟುಂಬದ ಅವಲಂಬಿತರಿಗೆ ಮಾನವೀಯ ಹಿತದೃಷ್ಟಿಯಿಂದ ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿಯನ್ನು ಕಲ್ಪಿಸುವುದು.

(ಕ್ರಮ:ಪೌರಾಡಳಿತ ನಿರ್ದೇಶನಾಲಯ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)

ಈ ತಿಂಗಳ ಅಂತ್ಯದಲ್ಲಿ ಅಥವಾ ಮುಂದಿನ ತಿಂಗಳ ಮೊದಲ ವಾರದಲ್ಲಿ ಮತ್ತೊಂದು ಸಭೆಯನ್ನು ಏರ್ಪಡಿಸುವಂತೆ ಹಾಗೂ ಸಭೆಗೆ ಸಮಿತಿಯ ಸದಸ್ಯರೇ ಖುದ್ದು ಹಾಜರಾಗುವಂತೆ ಸೂಚಿಸಿದರು.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಕಡತ ಸಂಖ್ಯೆ:** ಸಕಇ 186 ಎಸ್‌ಡಿಸಿ 2021

**(ಕೋಟ ಶ್ರೀನಿವಾಸ ಪೂಜಾರಿ)**
ಸಮಾಜ ಕಲ್ಯಾಣ ಹಾಗೂ ಹಿಂದುಳಿದ
ವರ್ಗಗಳ ಕಲ್ಯಾಣ ಇಲಾಖೆ ಹಾಗೂ
ಅಧ್ಯಕ್ಷರು, ರಾಜ್ಯ ಮೇಲ್ವಿಚಾರಣಾ ಸಮಿತಿ